# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:-** (1) ಶ್ರೀ ಮಂಜುನಾಥ.ಪಿ.ಹವಾಲ್ದಾರ್, ಕಿರಿಯ ಇಂಜಿನಿಯರ್, (2) ಶ್ರೀ ಜಿ.ಎಸ್.ರಾಮು, ಅಂದಿನ ಸಹಾಯಕ ಕಾರ್ಯಪಾಲಕ ಇಂಜಿನಿಯರ್ (ಪ್ರಸ್ತುತ ನಿವೃತ್ತಿ), ಯೋಜನಾ ಉಪ-ವಿಭಾಗ, ಎನ್.ಆರ್.ಪುರ ಮತ್ತು (3) ಶ್ರೀ ಸಿ.ಓ.ನಂಧೀಶ್, ಅಂದಿನ ಕಾರ್ಯಪಾಲಕ ಇಂಜಿನಿಯರ್, ಯೋಜನಾ ವಿಭಾಗ, ಚಿಕ್ಕಮಗಳೂರು ಇವರುಗಳ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಪ್ರಕರಣವನ್ನು ಮಾನ್ಯ ಉಪ ಲೋಕಾಯುಕ್ತ ರವರಿಗೆ ವಹಿಸುವ ಬಗ್ಗೆ – ಆದೇಶ.

**ಓದಲಾಗಿದೆ:-**

ಉಪ ನಿಬಂಧಕರು ವಿಚಾರಣೆಗಳು-01, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ಅ.ಸ.ಪತ ಸಂಖ್ಯೆ: ಕಂಪ್ಲೇಂಟ್ / ಉಪಲೋಕ್ / ಎಂವೈಎಸ್ / 422 /2010 / ಡಿಆರ್ಇ-1, ದಿನಾಂಕ: 21.10.2013.

**ಪ್ರಸ್ತಾವನೆ:**

ಮೇಲೆ ಓದಲಾದ ದಿನಾಂಕ: 21.10.2013ರ ಅರೆ ಸರ್ಕಾರಿ ಪತ್ರದಲ್ಲಿ ಉಪ ನಿಬಂಧಕರು ವಿಚಾರಣೆಗಳು-1, ಕರ್ನಾಟಕ ಲೋಕಾಯಕ್ತ, ಬೆಂಗಳೂರು ರವರು (1) ಶ್ರೀ ಮಂಜುನಾಥ.ಪಿ.ಹವಾಲ್ದಾರ್, ಕಿರಿಯ ಇಂಜಿನಿಯರ್, (2) ಶ್ರೀ ಜಿ.ಎಸ್.ರಾಮು, ಅಂದಿನ ಸಹಾಯಕ ಕಾರ್ಯಪಾಲಕ ಇಂಜಿನಿಯರ್ (ಪ್ರಸ್ತುತ ನಿವೃತ್ತಿ), ಯೋಜನಾ ಉಪ-ವಿಭಾಗ, ಎನ್.ಆರ್.ಪುರ ಮತ್ತು (3) ಶ್ರೀ ಸಿ.ಓ.ನಂದೀಶ್, ಅಂದಿನ ಕಾರ್ಯಪಾಲಕ ಇಂಜಿನಿಯರ್, ಯೋಜನಾ ವಿಭಾಗ, ಚಿಕ್ಕಮಗಳೂರು ಇವರುಗಳು ಸಾರ್ವಜನಿಕ ನೌಕರರಾಗಿದ್ದು ದುರ್ವರ್ತನೆಯಿಂದ ನಡೆದುಕೊಂಡಿದ್ದುದರ ನಡವಳಿಕೆ ಕುರಿತು ಮಾನ್ಯ ಉಪಲೋಕಾಯುಕ್ತರವರ ಆದೇಶದ ಮೇರೆಗೆ ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(3)ರ ದಿನಾಂಕ: 10.10.2013ರ ಮೂಲ ವರದಿಯನ್ನು ಸಂಬಂಧಿಸಿದ ದಾಖಲಾತಿಗಳೊಂದಿಗೆ ಲಗತ್ತಿಸಿ ಕಳುಹಿಸುತ್ತಾ, ಈ ಶಿಫಾರಸ್ಸಿನನ್ವಯ ಸಕ್ಷಮ ಪ್ರಾಧಿಕಾರವು ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿದ ಕ್ರಮದ ಬಗ್ಗೆ ಮರು ಟಪಾಲಿನಲ್ಲಿಯೇ ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(4)ರ ಪ್ರಕಾರ ಲೋಕಾಯುಕ್ತ ಸಂಸ್ಥೆಗೆ ವರದಿ ಮಾಡಬೇಕೆಂದು ಕೋರಿರುತ್ತಾರೆ.

ಮಾನ್ಯ ಉಪ ಲೋಕಾಯುಕ್ತರು ಕರ್ನಾಟಕ ಲೋಕಾಯಕ್ತ ಕಾಯ್ದೆ 1984ರ ಸೆಕ್ಷನ್ 12(3)ರಡಿ ಕಳುಹಿಸಿರುವ ತಮ್ಮ ಮೂಲ ವರದಿಯಲ್ಲಿ ಶ್ರೀ ಸತೀಶ್.ಹೆಚ್.ಎಂ., ಜಿ.ಪಂ.ಸದಸ್ಯರು ಅಂಚೆ: ಜಯಪುರ, ತಾಲ್ಲೂಕ್: ಕೊಪ್ಪ, ಜಿಲ್ಲೆ: ಚಿಕ್ಕಮಗಳೂರು ರವರು ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನಾ ಅಡಿ ಕೊಪ್ಪ ತಾಲ್ಲೂಕಿನ ಕಾಚಿಗೆ –ಮೆಗೂರ (Kachige - Megoor) ರಸ್ತೆ ನಿರ್ಮಾಣ ಮತ್ತು ಮೇಲ್ವಿಚಾರಣೆ ಕಾಮಗಾರಿಯನ್ನು ಸಮರ್ಪಕವಾಗಿ ನಿರ್ವಹಿಸದಿರುವುದಕ್ಕೆ ಕಾರಣರಾಗಿರುವ ಸಂಬಂಧಿಸಿದ ಇಂಜಿನಿಯರ್‌ಗಳ ವಿರುದ್ಧ ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ದೂರು ನೀಡಿದ್ದು, ಸದರಿ ದೂರಿನನ್ವಯ ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 9ರ ಪ್ರಕಾರ Chief Engineer, Technical Audit Cell (ತನಿಖಾಧಿಕಾರಿ) ರವರು ದಿನಾಂಕ: 08.02.2011ರಂದು ದೂರುದಾರರ ಗೈರುಹಾಜರಿಯಲ್ಲಿ ತಪಾಸಣೆ ನಡೆಸಿದ್ದು, 2.38

ಕಿ.ಮೀ ಯಿಂದ 5.20 ಕಿ.ಮೀರವರೆಗಿನ ಸದರಿ ರಸ್ತೆ ಕಾಮಗಾರಿಯಲ್ಲಿ ಕೆಲವು ನ್ಯೂನತೆಗಳು ಕಂಡು ಬಂದಿದ್ದು, ಕಳಪೆ ಗುಣಮಟ್ಟದಿಂದ ಕೂಡಿದ್ದು, ರೂ. 7,25,462/- ಮತ್ತು ರೂ. 56,527/- ಒಟ್ಟು ರೂ. 7,81,989/-ಗಳಷ್ಟು ಸರ್ಕಾರದ ಹಣ ನಷ್ಟವಾಗಲು ಮೇಲ್ಕಂಡ 3 ಜನ ಅಧಿಕಾರಿಗಳು ಕಾರಣರಾಗಿದ್ದು, ಕ್ರಮವಾಗಿ ರೂ. 2,93,246/-, ರೂ.2,93,246 ಮತ್ತು ರೂ.1,95,497/-ಗಳ ಸರ್ಕಾರದ ಹಣದ ನಷ್ಟಕ್ಕೆ ಬಾಧ್ಯಸ್ಥರಾಗಿರುತ್ತಾರೆಂದು ವರದಿ ನೀಡಿರುತ್ತಾರೆ. ಇದರಿಂದಾಗಿ '1 ರಿಂದ 3ನೇ ಎದುರುದಾರರು' ಮೇಲ್ಕಾಣಿಸಿದ ಸರ್ಕಾರದ ಹಣದ ನಷ್ಟಕ್ಕೆ ಹೊಣೆಗಾರರಾಗಿರುವು ಮತ್ತು ಕರ್ತವ್ಯಲೋಪಕ್ಕೆ ಕಾರಣರಾಗಿರುವುದು ಮೇಲ್ನೋಟಕ್ಕೆ ನಿಜವೆಂದು ಕಂಡು ಬಂದಿದ್ದು, ಮಾನ್ಯ ಉಪ ಲೋಕಾಯುಕ್ತರ ಶಿಫಾರಸ್ಸಿನಂತೆ, 2ನೇ ಎದುದಾರರು ನಿವೃತ್ತಿಯಾಗಿರುವುದರಿಂದ ಸದರಿಯವರ ವಿರುದ್ಧ ಇಲಾಖಾ ವಿಚಾರಣೆ ಜರುಗಿಸಲು ಕ.ನಾ.ಸೇ.ನಿ.ನಿಯಮ-214(2)(ಬಿ)(i)ರ ಪ್ರಕಾರ ಸರ್ಕಾರದ ಅನುಮತಿ ನೀಡಲು ಹಾಗೂ ಸದರಿಯವರುನ್ನೊಳಗೊಂಡಂತೆ '1 ಮತ್ತು 3ನೇ ಎದುರುದಾರರ' ವಿರುದ್ಧ ಶಿಸ್ತು ಕ್ರಮ ಜರುಗಿಸಲು ಹಾಗೂ ಅದಕ್ಕಾಗಿ ವಿವರವಾದ ಇಲಾಖಾ ವಿಚಾರಣೆ ಕೈಗೊಳ್ಳಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ-14(ಎ)ರ ಪ್ರಕಾರ ಕರ್ನಾಟಕ ಉಪ ಲೋಕಾಯುಕ್ತ ರವರಿಗೆ ವಹಿಸಲು ಸರ್ಕಾರವು ನಿರ್ಧರಿಸಿ ಈ ಮುಂದಿನಂತೆ ಆದೇಶಿಸಿದೆ.

**ಆದೇಶ ಸಂಖ್ಯೆ: ಗ್ರಾಅಪ 37 ಇಎನ್‌ಕ್ಯೂ 2013,**
**ಬೆಂಗಳೂರು, ದಿನಾಂಕ: 22.11.2013.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, (1) ಶ್ರೀ ಮಂಜುನಾಥ.ಪಿ. ಹವಾಲ್ದಾರ್, ಕಿರಿಯ ಇಂಜಿನಿಯರ್, ಯೋಜನಾ ಉಪ-ವಿಭಾಗ, ಎನ್.ಆರ್.ಪುರ ಮತ್ತು (2) ಶ್ರೀ ಸಿ.ಓ.ನಂದೀಶ್, ಅಂದಿನ ಕಾರ್ಯಪಾಲಕ ಇಂಜಿನಿಯರ್, ಯೋಜನಾ ವಿಭಾಗ, ಚಿಕ್ಕಮಗಳೂರು ಇವರುಗಳ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ-14(ಎ)ರಡಿಯಲ್ಲಿ ಹಾಗೂ (3) ಶ್ರೀ ಜಿ.ಎಸ್.ರಾಮು, ಅಂದಿನ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಯೋಜನಾ ಉಪ-ವಿಭಾಗ, ಎನ್.ಆರ್.ಪುರ (ಪ್ರಸ್ತುತ ನಿವೃತ್ತ) ಇವರ ವಿರುದ್ಧ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ನಿಯಮ-214(2)(ಬಿ)(i)ರನ್ವಯ ಇಲಾಖಾ ವಿಚಾರಣೆ ಜರುಗಿಸಲು ಪ್ರಕರಣವನ್ನು ಕರ್ನಾಟಕ ಉಪಲೋಕಾಯುಕ್ತರವರಿಗೆ ವಹಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಹೆಚ್.ಸಿ.ರಾಜಪ್ಪ),
ಸರ್ಕಾರದ ಅಧೀನ ಕಾರ್ಯದರ್ಶಿ(ಸೇವೆಗಳು-ಎ),
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಪ್ರತಿ;

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು (ಲೆಕ್ಕಪತ್ರ 1 &2) / (ಆಡಿಟ್).
2. ನಿಬಂಧಕರು, ಕರ್ನಾಟಕ ಉಪಲೋಯುಕ್ತ ಕಚೇರಿ, ಬೆಂಗಳೂರು.

3. ಉಪ ನಿಬಂಧಕರು ವಿಚಾರಣೆಗಳು-01, ಕರ್ನಾಟಕ ಲೋಕಾಯುಕ್ತ ಕಚೇರಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
4. ಸರ್ಕಾರದ ಪ್ರಧಾನ ಕಾರ್ಯದರ್ಶಿ / ಕಾರ್ಯದರ್ಶಿ, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ.
5. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಶೇಷಾದ್ರಿಪುರಂ, ಬೆಂಗಳೂರು.
6. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಚಿಕ್ಕಮಗಳೂರು
7. ಸಂಬಂಧಿಸಿದ ನೌಕರರಿಗೆ – ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಚಿಕ್ಕಮಗಳೂರು ಇವರ ಮುಖಾಂತರ
8. ಮಾನ್ಯ ಗ್ರಾ.ಅ.ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿ.
9. ಗ್ರಾ.ಅ.ಪಂ.ರಾಜ್ ಇಲಾಖೆಯ ಪ್ರಧಾನ ಕಾರ್ಯದರ್ಶಿ / ಕಾರ್ಯದರ್ಶಿ (ಪಂ.ರಾಜ್) / ಅಪರ ಕಾರ್ಯದರ್ಶಿ (ಆಡಳಿತ) ಇವರ ಆಪ್ತ ಕಾರ್ಯದರ್ಶಿ / ಆಪ್ತ ಸಹಾಯಕರು.
10. ಹೆಚ್ಚುವರಿ ಪ್ರತಿ : ರಕ್ಷಾ ಕಡತ : ಸೂಚನಾ ಫಲಕ : ಕಂಪ್ಯೂಟರ್ ಸೆಲ್.